


ಎಲ್ಲ ಕಡೆ ಗಾಳಿಯಂತ್ರವನ್ನು ಸ್ಥಾಪಿಸಿದ್ದಾರೆ. ಯಾವತ್ತೂ ಗಾಳಿ ಬೀಸುವ ಭೂಪ್ರದೇಶದಲ್ಲಿ ಗಾಳಿಯಂತ್ರದ ಮೂಲಕ ವಿದ್ಯುತ್ ಉತ್ಪಾದಿಸಿ , ಯಂತ್ರ ತಿರುಗಿಸಿ ನೀರನ್ನು ಪುನಃ ಸಮುದ್ರಕ್ಕೆ ಬಿಡಲಾಗುತ್ತದೆ. ಈ ದೇಶದಲ್ಲಿರುವಷ್ಟು ಗಾಳಿಯಂತ್ರಗಳನ್ನು (**windmill** ) ನೀವು ಬೇರೆಲ್ಲೂ ಕಾಣಲಾರಿರಿ. ಕಡಲು ಕಬಳಿಸಿದ ನೆಲವನ್ನು ಹಿಂದೆ ಪಡೆಯಲು ಮತ್ತೆ ಉಳಿಸಿಕೊಳ್ಳಲು, ಪ್ರಕೃತಿಯ ಒಂದು ವೈಪರಿತ್ಯವನ್ನೋ ಅಥವಾ ಅನಾನುಕೂಲತೆಯನ್ನೋ ಗೆಲ್ಲಲು ಅದೇ ಪ್ರಕೃತಿಯ ಇನ್ನೊಂದು ಶಕ್ತಿ, ನೀರನ್ನು ಹದ್ದುಬಸ್ತಿನಲ್ಲಿಡಲು ಗಾಳಿಯ ಬಳಕೆ!

ಪುರಾತನ ಕಾಲದಲ್ಲಿ ಬಳಕೆ ಆಗುತ್ತಿದ್ದ ಮರದ ರೆಕ್ಕೆಯ ಗಾಳಿಯಂತ್ರಗಳು ಈಗ ಬಳಕೆಯಲ್ಲಿ ಇಲ್ಲದಿದ್ದರೂ ಸ್ಮಾರಕಗಳಾಗಿ ಪ್ರವಾಸಿಗರಿಗೆ ಛಾಯಾಗ್ರಹಣದ ಮತ್ತು ಸೆಲ್ಫಿ ಯ ವಸ್ತುವಾಗಿ ನಿಂತಿವೆ. ಈಗೆಲ್ಲ ಹೊಸವಿನ್ಯಾಸದ ಲೋಹದ ಗಾಳಿ ಯಂತ್ರಗಳು ದೇಶ ರಕ್ಷಣೆಯ ಹೊಣೆ ಹೊತ್ತಿವೆ.

ಶತಮಾನಗಳ ಹಿಂದೆ ಮುಳುಗಿದ ಭೂಭಾಗ ಮರಳಿ ಪಡೆದವರು ಭೂಮಿ ಮತ್ತು ಪ್ರಕೃತಿಯ ಬೆಲೆ ಚೆನ್ನಾಗಿ ಅರಿತಿದ್ದಾರೆ. ಹಾಲೆಂಡಿನ ರಾಜಧಾನಿ ಅಮ್‌ಸ್ಟರ್‌ಡ್ಯಾಮ್‌ನಲ್ಲಿ ಓಡಾಡುವಾಗ ನಿಸರ್ಗದೊಡನೆ ಇವರ ಪ್ರೀತಿ ಮತ್ತು ಸ್ನೇಹ ಎದ್ದು ಕಾಣುತ್ತದೆ. ಡಚ್‌ರ ನಿಸರ್ಗ ಪ್ರೇಮದ ಇನ್ನೊಂದು ಸಂಕೇತ ಇವರ ಸೈಕಲ್ ಪ್ರೀತಿ. ಜಗತ್ತಿನ ಎಲ್ಲ ದೇಶಗಳ ರಾಜಧಾನಿಗಳಲ್ಲೇ 'ಅತ್ಯಂತ ಸೈಕಲ್ ಸ್ನೇಹಿ' ಎನ್ನುವ ಪಟ್ಟ ಅಮ್‌ಸ್ಟರ್‌ಡ್ಯಾಮ್‌ನದ್ದು. ಬಡವ– ಶ್ರೀಮಂತ ಎನ್ನುವ ವರ್ಗಬೇಧ ಇಲ್ಲದೆ ಸೈಕಲ್ ಬಳಸುತ್ತಾರೆ ಇಲ್ಲಿ. ಚಿಕ್ಕ ಮಕ್ಕಳನ್ನು ಹೊರತು ಪಡಿಸಿ ಸೈಕಲ್ ಹೊಡೆಯುವಷ್ಟು ಪ್ರಾಯ ಪ್ರಬುದ್ಧರನ್ನು ಲೆಕ್ಕಕ್ಕೆ ಹಿಡಿದರೆ ಪ್ರತಿ ಒಬ್ಬನ ಬಳಿಯೂ ಕನಿಷ್ಠ ಒಂದು ಸೈಕಲ್ ಇದೆ ಎಂದು ಅಂಕಿ ಅಂಶ ಹೇಳುತ್ತದೆ. ಏರು ತಗ್ಗುಗಳಿಲ್ಲದ ಸಮತಟ್ಟಾದ ಭೂಪ್ರದೇಶ, ಹಾಲಂಡ್ ದೇಶದ ಸೈಕಲ್ ಪ್ರಿಯರಿಗೆ ಸಹಕಾರಿಯಾಗಿದೆ. ಸೈಕಲ್ ಗಳಿಗಾಗಿ ಪ್ರತ್ಯೇಕ ಮಾರ್ಗ, ನಿಲ್ದಾಣಗಳು ಮತ್ತೆ ರಸ್ತೆಗಳಲ್ಲಿ ಸೈಕಲ್ ಸವಾರರಿಗೆ ವಿಶೇಷ ಗೌರವ ಇದೆ.

ಕೆಲಸ ಹುಡುಕಿಕೊಂಡು ತಮ್ಮ ದೇಶ ತೊರೆದು ಯೂರೋಪಿನ ಇನ್ನೊಂದು ದೇಶಕ್ಕೆ ವಲಸೆ ಹೋದ ಡಚ್ ಜನರೂ ಸೈಕಲ್ ಪ್ರೀತಿಯನ್ನು ಮುಂದುವರಿಸುತ್ತಾರೆ. ಇಂಗ್ಲೆಂಡ್ ನ ನನ್ನ ಕಚೇರಿಯ ಡಚ್ ಸ್ನೇಹಿತರು 20–30 ಕಿಲೋಮೀಟರು ದೂರದಿಂದ ಸೈಕಲ್ ತುಳಿದುಕೊಂಡು ಕೆಲಸಕ್ಕೆ ಬರುವವರು. ಇವರು ಇಂಗ್ಲೆಂಡ್‌ನ ವಾಹನ ದಟ್ಟಣೆಯ ಕಿರಿದಾದ ರಸ್ತೆಗಳ ಬಗ್ಗೆ

